# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಇ(2) 73 /2021-22 ದಿನಾಂಕ: 24-07-2021

## ಪರಿಷ್ಕೃತ ತಿದ್ದುಪಡಿ ಅಧಿಸೂಚನೆ

ವಿಷಯ: ದಿನಾಂಕ: 23-01-2021ರಂದು ನಡೆದ 2019ನೇ ಸಾಲಿನ ಸಹಾಯಕರು/ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಯಲ್ಲಿನ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಸಂಬಂಧಿಸಿದಂತೆ, ತಿದ್ದುಪಡಿ ಬಗ್ಗೆ.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3069:2019-20, ದಿನಾಂಕ:31-01-2020
2) ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3070:2019-20, ದಿನಾಂಕ:31-01-2020
3) ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3071:2019-20, ದಿನಾಂಕ:31-01-2020
4) ಸೇರ್ಪಡೆ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3083:2019-20, ದಿನಾಂಕ:10-02-2020
5) 2ನೇ ಸೇರ್ಪಡೆ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3819:2020-21, ದಿನಾಂಕ:15-01-2021.
6) ಆಯೋಗದ ಪತ್ರಿಕಾ ಪ್ರಕಟಣೆ ಸಂಖ್ಯೆ: ಇ(2)3822/2020-21/ಪಿಎಸ್ ಸಿ, ದಿನಾಂಕ: 16-01-2021.
7) ಆಯೋಗದ ನಡವಳಿ ದಿನಾಂಕ: 06-07-2021.
8) ಆಯೋಗದ ತಿದ್ದುಪಡಿ ಅಧಿಸೂಚನೆ ಸಂಖ್ಯೆ:ಇ(2)69/2021-22, ದಿನಾಂಕ: 23-07-2021

***********

2019ನೇ ಸಾಲಿನ ಸಹಾಯಕರು/ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಆಯೋಗವು **ದಿನಾಂಕ: 23-01-2021ರಂದು ನಡೆಸಲಾದ ಕಡ್ಡಾಯ ಕನ್ನಡ ಭಾಷಾ (ವಿ.ಸೂ-384) ಪರೀಕ್ಷೆಯ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯಲ್ಲಿ ಬಾರ್ ಕೋಡ್/ತಾಂತ್ರಿಕ ದೋಷ ಉಂಟಾಗಿರುವ ಹಿನ್ನೆಲೆಯಲ್ಲಿ ದಿನಾಂಕ:23-01-2021ರಂದು ನಡೆಸಲಾದ ಕಡ್ಡಾಯ ಕನ್ನಡ ಭಾಷಾ (ವಿ.ಸೂ-384) ಪರೀಕ್ಷೆಯ ಮೌಲ್ಯಮಾಪನ ಮಾಡಲು ಸಾಧ್ಯವಾಗದೇ ಇರುವುದರಿಂದ, ಆಯೋಗದ ದಿನಾಂಕ: 06-07-2021ರ ನಡವಳಿಯಂತೆ ದಿನಾಂಕ: 23-01-2021ರ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ಮಾತ್ರ ರದ್ದುಪಡಿಸಲಾಗಿದೆ.**

ಮುಂದುವರೆದು, ಪ್ರಸ್ತುತ ಕೋವಿಡ್-19 ಪರಿಸ್ಥಿತಿ ಇರುವುದರಿಂದ, ಸದರಿ ನೇಮಕಾತಿಗಳ ಆನ್-ಲೈನ್ ಅರ್ಜಿಯಲ್ಲಿ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ಕೋರಲಾದ ಎಲ್ಲಾ ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ನಡೆಸುವ ಬದಲು, ಹಾಲಿ ಸಹಾಯಕರ/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ದಿನಾಂಕ:28-02-2021ರ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶ ಪ್ರಕ್ರಿಯೆಯನ್ನು ಮುಂದುವರೆಸಿ, ಅಧಿಸೂಚಿಸಲಾದ ಹುದ್ದೆಗಳ ನೇರ/ಸಮತಳ ವರ್ಗಗಳಿಗೆ ಆಯೋಗವು ನಿರ್ಣಯಿಸುವ ಅನುಪಾತದಲ್ಲಿ ಮೂಲದಾಖಲೆಗಳ ಪರಿಶೀಲನೆಗೆ ಅರ್ಹತಾ ಪಟ್ಟಿ ಸಿದ್ಧವಾದ ನಂತರ ಅಭ್ಯರ್ಥಿಗಳ ಮಾಹಿತಿಗಾಗಿ ಅರ್ಹತಾ ಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

...2

ತದನಂತರ ಆ ಅರ್ಹತಾ ಪಟ್ಟಿಯಲ್ಲಿ ಬರುವ ಅಭ್ಯರ್ಥಿಗಳಲ್ಲಿ ದಿನಾಂಕ: 23-01-2021ರಂದು ನಡೆದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಮಾತ್ರ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಿ, ಅದರಲ್ಲಿನ ಅರ್ಹತೆಯ ಆಧಾರದ ಮೇಲೆಯೇ ಅವರುಗಳನ್ನು ಮುಂದಿನ ನೇಮಕಾತಿ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

ಮೇಲ್ಕಂಡಂತೆ ಅಂತಹ ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಿ ಅದರ ಫಲಿತಾಂಶದ ನಂತರವೇ ಮೂಲದಾಖಲೆಗಳ ಪರಿಶೀಲನೆಯ ಕಾರ್ಯವನ್ನು ನಡೆಸಲಾಗುವುದೆಂದು ಸಹ ಈ ಮೂಲಕ ತಿಳಿಸಿದೆ.

ದಿನಾಂಕ: 31-01-2020ರ ರಾಜ್ಯ ಮಟ್ಟದ ಉಳಿಕೆ ಮೂಲ ವೃಂದ, ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಮತ್ತು ಕರ್ನಾಟಕ ಭವನ, ನವದೆಹಲಿಯಲ್ಲಿನ ಸ್ಥಳೀಯ ಮತ್ತು ಉಳಿಕೆ ಮೂಲ ವೃಂದದ ಸಹಾಯಕರು/ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿ ಅಧಿಸೂಚನೆಗಳಲ್ಲಿನ ಕಡ್ಡಾಯ ಕನ್ನಡ ಭಾಷಾ ಪರೀಕ್ಷಾ ವಿಷಯದ ಕುರಿತ ಆಯೋಗದ ಮೇಲ್ಕಂಡ ನಿರ್ಣಯವನ್ನು ತಿದ್ದುಪಡಿಯೆಂದು ಓದಿಕೊಳ್ಳತಕ್ಕದ್ದು ಎಂದು ಆಯೋಗದ ದಿನಾಂಕ: 23-07-2021ರ ತಿದ್ದುಪಡಿ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. **ಮುಂದುವರೆಸುತ್ತಾ ಆಯೋಗದ ನಿರ್ಣಯದನ್ವಯ ದಿನಾಂಕ: 31-01-2020ರ ಅಧಿಸೂಚನೆಗಳಲ್ಲಿ ಅಳವಡಿಸಲಾಗಿದ್ದ ಈ ಕೆಳಕಂಡ ಅಂಶಗಳನ್ನು ಕೈಬಿಡಲಾಗಿದೆ.**

| ಕ್ರ.ಸಂ | ಅಧಿಸೂಚನೆ ಸಂಖ್ಯೆ | ಕೈಬಿಡಲಾದ ಅಂಶಗಳು |
|---|---|---|
| 1 | ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3069:2019-20, ದಿನಾಂಕ:31-01-2020 | ಸದರಿ ಅಧಿಸೂಚನೆಯ ಕ್ರ.ಸಂ. 7.1ರ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯ ವಿಶೇಷ ಸೂಚನೆಯ ಕ್ರ.ಸಂ. 04 ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಸಾಮಾನ್ಯ ಕನ್ನಡ/ ಸಾಮಾನ್ಯ ಇಂಗ್ಲಿಷ್ ಮತ್ತು ಸಾಮಾನ್ಯ ಜ್ಞಾನ ಪತ್ರಿಕೆಯ ಉತ್ತರ ಪುಸ್ತಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ. |
| 2 | ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3070:2019-20, ದಿನಾಂಕ:31-01-2020 | ಸದರಿ ಅಧಿಸೂಚನೆಯ ಕ್ರ.ಸಂ. 7.1ರ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯ ವಿಶೇಷ ಸೂಚನೆಯ ಕ್ರ.ಸಂ. 04 ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಸಾಮಾನ್ಯ ಕನ್ನಡ/ ಸಾಮಾನ್ಯ ಇಂಗ್ಲಿಷ್ ಮತ್ತು ಸಾಮಾನ್ಯ ಜ್ಞಾನ ಪತ್ರಿಕೆಯ ಉತ್ತರ ಪುಸ್ತಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ. |
| 3 | ಅಧಿಸೂಚನೆ ಸಂಖ್ಯೆ: ಪಿಎಸ್ ಸಿ ಇ(2):3071:2019-20, ದಿನಾಂಕ:31-01-2020 | ಸದರಿ ಅಧಿಸೂಚನೆಯ ಕ್ರ.ಸಂ. 7.1ರ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯ ವಿಶೇಷ ಸೂಚನೆಯ ಕ್ರ.ಸಂ. 04 ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಸಾಮಾನ್ಯ ಕನ್ನಡ/ ಸಾಮಾನ್ಯ ಇಂಗ್ಲಿಷ್ ಮತ್ತು ಸಾಮಾನ್ಯ ಜ್ಞಾನ ಪತ್ರಿಕೆಯ ಉತ್ತರ ಪುಸ್ತಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ. |

ಆಯೋಗದ ಆದೇಶ ಮೇರೆಗೆ,

Sathyavathy
(ಜಿ. ಸತ್ಯವತಿ) 24.7.2021
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ